

No.MAG(3)/NPP/98/2023-2024

No.MAG(3)/NPP/99/2023-2024

ಸ್ಥಾಪನೆ : ೧೯೭೪

# ಹೊಂಗನಸು



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೧೮

ಸಂಪುಟ: ೧೩ ಸಂಚಿಕೆ: ೬ | ಸೆಪ್ಟೆಂಬರ್ ೨೦೨೫ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ವಿಶ್ವಾವಸು ಸಂವತ್ಸರ
Volume: 13 Issue: 6 | September 2025 | Pages-8 | Annual Subscription Rs.20/- | ಭಾದ್ರಪದ-ಆಶ್ವೀಜ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೪೨೩೮೧೨೧೨೨
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂನುಡಿ

## ಸಂಶೋಧನಾಸ(ಶ)ಕ್ತಿ

ಸರ್ವೇಸಾಮಾನ್ಯವಾಗಿ ಯಾವುದೇ ವಿಷಯದ ಮೇಲಿನ ಸಂಶೋಧನೆ ಇರಲಿ, ಅದರಲ್ಲಿ ಅವುಗಳದ್ದೇ ಆದ ವಿವಿಧ ಮುಖಗಳು, ಉದ್ದೇಶಗಳು, ಪಥಗಳು ಮತ್ತು ವಿಧಾನಗಳು ಇರುತ್ತವೆ. ಅದರಲ್ಲೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಂಶೋಧನೆಗೆ ತನ್ನದೇ ಆದ ಮಹತ್ವವಿದ್ದು ಭದ್ರವೋ ಅಭದ್ರವೋ ಅದು ಸಂಶೋಧನಾ ನಿರತ ವ್ಯಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಶೈಕ್ಷಣಿಕ ಕೇಂದ್ರಗಳಲ್ಲಿ ಇದರ ಪ್ರಪ್ರಥಮ ಮೂಲ ಉದ್ದೇಶ ಪಿಎಚ್.ಡಿ. ಪದವಿ ಪಡೆಯುವುದು. ಇತ್ತೀಚಿಗೆ ಈ ಪ್ರಕ್ರಿಯೆ ಕೇವಲ ಉದ್ಯೋಗಕ್ಕೆ ಸಂಬಂಧಿಸಿದ ಅನಿವಾರ್ಯತೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಂಶೋಧನಾ ಗುಣಮಟ್ಟದ ಮೇಲೆ ಇದರ ಪರಿಣಾಮ ಆದರೂ ಆಗಬಹುದು. ಹಾಗೆಂದ ಮಾತ್ರಕ್ಕೆ ಎಲ್ಲವೂ 'ಯತ್ಸಹಜಂ' ಅನ್ನಲೂ ಬರುವುದಿಲ್ಲ. ಇದಕ್ಕೆ ಸಾಮಾಜಿಕ ವಾತಾವರಣದ ಅವಶ್ಯಕತೆಯೂ ಪ್ರಭಾವ ಬೀರಿರಬಹುದು.

ಇದರಲ್ಲಿ ಅಡಕವಾಗಿರುವ ಮತ್ತೊಂದು ವಿಷಯವೆಂದರೆ, ಪದವಿಗಾಗಿ ಮಾಡಿದ ಸಂಶೋಧನೆ, ಒಂದು ಮಿತಿಯಲ್ಲಿ ಜ್ಞಾನ ದೊರಕಿಸಬಹುದೇ ಹೊರತು, ಪರಿಪಕ್ವತೆಯನ್ನು ನೀಡುವುದಿಲ್ಲ. ಪಿಎಚ್. ಡಿ. ಪದವಿ ನಂತರದ ಸಂಶೋಧನೆ ಪರಿಪಕ್ವ ಜ್ಞಾನಕ್ಕೆ ಎಡೆ ಮಾಡಿಕೊಡುವುದರೊಂದಿಗೆ, ಆ ವ್ಯಕ್ತಿಗೆ ಆತ್ಮವಿಶ್ವಾಸ, ಆತ್ಮ ಸ್ಥೈರ್ಯ ಹಾಗೂ ಆತ್ಮ ತೃಪ್ತಿಯನ್ನು ನೀಡುತ್ತದೆ. ಆಶ್ರಯಿಸಿ ಬಂದವರಿಗೆ ಸಮರ್ಪಕವಾಗಿ ಜ್ಞಾನಧಾರೆ ಎರೆಯಲು ಆತನನ್ನು ಪೂರ್ಣತೆಯತ್ತ ಒಯ್ಯುತ್ತದೆ.

ಒಂದು ಮಾತನ್ನು ಸಂಶೋಧನಾಸಕ್ತರು ಗಮನಿಸಬೇಕು. ಪದವಿಗೋಸ್ಕರ, ಒಬ್ಬ ಮಾರ್ಗದರ್ಶಕರ ನಿರ್ದೇಶನದಲ್ಲಿ ಆಯ್ಕೆ ಮಾಡಿಕೊಂಡ ವಿಷಯದ ಮೇಲೆ ಅಧ್ಯಯನ ಮುಗಿಸಿದ ನಂತರ, ಅವರಿಗೆ ಅನೇಕ ದಾರಿಗಳುಂಟು: ಅದೇ ವಿಷಯದ ಮೇಲೆ ತಮ್ಮ ಮುಂದಿನ ಅಧ್ಯಯನವನ್ನು ಮುಂದುವರೆಸುವುದು ಅಥವಾ ತಾವೇ ಮತ್ತೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಮುಂದುವರೆಯುವುದು. ಮೊದಲನೆಯ ಪಥ ಪದವಿಗೋಸ್ಕರ; ಆದರೆ, ಮತ್ತೊಂದು ಪಥ ತಮ್ಮದೇ ಆದ ಆಸಕ್ತಿಯುಳ್ಳ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಮುಂದಿನ ಸಂಶೋಧನಾಸಕ್ತರಿಗೆ ಅನುಕೂಲ ಆಗುವಂತೆ ತಮ್ಮ ಛಾಪನ್ನು ಮೂಡಿಸುವುದು.

ಮುಂದುವರೆದು, ಪದವಿ ಪಡೆದು ಮತ್ತು ಅದರ ಆಧಾರದ ಮೇಲೆ ಉನ್ನತ ಸ್ಥಾನ ಪಡೆಯುವುದಷ್ಟೇ ಧ್ಯೇಯ ಆಗಬಾರದು. ಜ್ಞಾನ ಸಂಪಾದನೆಗಾಗಿ ಮತ್ತು ವಿದ್ವತ್ತಿಗಾಗಿ ನಿರಂತರವಾಗಿ ಸಂಶೋಧನೆಯನ್ನು ಮುಂದುವರೆಸುವುದು ಶ್ರೇಷ್ಠ ಪಥ. ಇದರಿಂದ ತಮ್ಮ ಕ್ಷೇತ್ರದಲ್ಲಿ ಮತ್ತು ಸಮಾಜದಲ್ಲಿ ಅಚ್ಚಳಿಯದಂಥ ಸಾಧನೆ ಮಾಡಿದ ವ್ಯಕ್ತಿಯೆಂಬ ಛಾಪು ಮೂಡಿಸಿದಂತಾಗುತ್ತದೆ. ಜೊತೆಗೆ ತಮ್ಮ ಕ್ಷೇತ್ರಕ್ಕೆ ಅವರು ನೀಡುವ ಅಮೋಘ ಕಾಣಿಕೆಯಾಗಿ ಪರಿಣಮಿಸುತ್ತದೆ. ಇದೇ ಸಂಶೋಧನಾಶಕ್ತಿ.

ಇದಲ್ಲದೇ ದೇಶದ ಉನ್ನತಿ ಮತ್ತು ಸಮಾಜಕ್ಕೆ ಉಪಯೋಗವಾಗುವಂತಹ ನೂತನ ವಿನ್ಯಾಸಗಳೂ ಉಂಟು, ಯುವ ಪೀಳಿಗೆಯ ಸಂಶೋಧನಾಸಕ್ತಿ ಮುಂದೆ ಸಂಶೋಧನಾಶಕ್ತಿಯಾಗಲಿ ಎಂದು ಶುಭ ಹಾರೈಸೋಣ.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

# ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು

## ದಿನಾಂಕ ೧೪/೦೮/೨೦೨೫ ರಂದು ನಡೆದ ಎ. ಸುಬ್ಬಯ್ಯ ಹೆಗಡೆ ಶಾಸ್ತ್ರಿ, ಎಂ.ಕೆ. ವಿಜಯಲಕ್ಷ್ಮಿ, ಎಂ. ಅನಂತರಂಗಾಚಾರ್ 'ಅನಂತರಂಗ ಪ್ರತಿಷ್ಠಾನ' ಸಂಯುಕ್ತ ದತ್ತಿ ಕಾರ್ಯಕ್ರಮ

**ಉಪನ್ಯಾಸಕರು:** ಪ್ರೊ. ಕೆ.ಎಸ್. ಮಧುಸೂದನ, ನಿವೃತ್ತ ಪ್ರಾಧ್ಯಾಪಕರು, ಎ.ಪಿ.ಎಸ್. ಕಾಲೇಜು, ಬೆಂಗಳೂರು, **ವಿಷಯ:** 'ಬಾಹತ್ತರ ನಿಯೋಗ'.

ಪ್ರಾರಂಭದಲ್ಲಿ ಹಸ್ತಲಿಪಿ ಸಂರಕ್ಷಕರಾದ ಬಿ.ಎಸ್.ಗುರುಪ್ರಸಾದ್ ಅವರು ದತ್ತಿಯ ವಿಹಂಗಮ ನೋಟವನ್ನು ಸಭಿಕರಿಗೆ ಪರಿಚಯಿಸಿದರು. ಈ ಮೂರು ದತ್ತಿಗಳು ಇರುವುದರಿಂದ ಪ್ರತಿ ವರ್ಷ ಒಂದೊಂದು ದತ್ತಿಯ ಆಶಯದಂತೆ ಒಂದೊಂದು ವಿಷಯದ ಮೇಲೆ ಉಪನ್ಯಾಸ ನಡೆಸಲಾಗುತ್ತದೆ ಎಂದರು.

**ಪಂಡಿತರಲ್ಲಿ ಪಂಡಿತೋತ್ತಮ**

ನಂತರ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು, ಸ್ವಾಗತ ಭಾಷಣ ನೆರವೇರಿಸಿ ಉಪನ್ಯಾಸಕರ ಸ್ಥೂಲ ಪರಿಚಯವನ್ನು ಮಾಡಿಸಿದರು. ಪ್ರೊ. ಮಧುಸೂದನ ಅವರು ಶಾಸ್ತ್ರ ಕೃತಿಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿರಬಹುದಾದ ಕೆಲವೇ ಪಂಡಿತರಲ್ಲಿ ಒಬ್ಬ ಪಂಡಿತೋತ್ತಮರು ಎಂದು ವಿಶೇಷವಾಗಿ ತಿಳಿಸಿದರು. ಮುಂದುವರೆಯುತ್ತಾ ಹಳಗನ್ನಡವನ್ನು ಉಳಿಸುತ್ತಿರುವ ಕೆಲವೇ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಅನೇಕ ಪಠ್ಯ ಪುಸ್ತಕಗಳ ವಿಷಯಗಳ ಆಯ್ಕೆ ಸಮಿತಿಗಳಲ್ಲಿ ಇವರ ಅತ್ಯಮೂಲ್ಯ ಉಪಸ್ಥಿತಿ ಮತ್ತು ಸಲಹೆಗಳು ಅನಿವಾರ್ಯವಾಗುತ್ತಿತ್ತು ಎಂದರೆ ಅತಿಶಯೋಕ್ತಿಯಲ್ಲ ಎಂದು ಪ್ರೊ. ಮಧುಸೂದನ ಅವರ ಗುಣಗಾನ ಮಾಡಿದರು.

**ಬಾಹತ್ತರ ಸಾಹಸ**

ಉಪನ್ಯಾಸ ಪ್ರಾರಂಭಿಸುತ್ತಾ ಮಧುಸೂದನ ಅವರು ಈ ಬಾಹತ್ತರ ನಿಯೋಗ ಕವಿತೆಗೆ ಪೂರಕವಾದ ಉದ್ಯೋಗ ಪರ್ವದ ಕೆಲವು ಸಂಗತಿಗಳನ್ನು ಹಿನ್ನುಡಿಯಾಗಿ ಹೇಳಿ, 'ವರಪುರೋಹಿತರ.......' ಎಂಬ ಕವಿತೆಯ ಉತ್ಪತ್ತಿಯನ್ನು ಬಹಳ ಮಾರ್ಮಿಕವಾಗಿ ಸಭೆಗೆ ಅರುಹಿದರು. ಈ ನುಡಿಗಳಲ್ಲಿ ಅಂದಿನ ಮಹಾಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು ಗೌರವದಿಂದ ಸಂಬೋಧಿಸಿದ್ದ ಸಂಗತಿ ಅಡಕವಾಗಿತ್ತು. ಈ ಬಾಹತ್ತರ ವಿನಿಯೋಗದಲ್ಲಿ ಬರುವ ಎಪ್ಪತ್ತೆರಡು ಜನರ ಹೆಸರನ್ನು ಹುಡುಕಿದ್ದೇ ಒಂದು ಸಾಹಸವಾಗಿತ್ತು. ಇದೊಂದು ಪರಿಕಲ್ಪನೆ ಸಂಶೋಧನೆಯ ರೀತಿಯಲ್ಲಿ ಆಗಿತ್ತು. ಆದರೆ ಇದು ಶೋಷಣೆಗೆ ಗುರಿಯಾಗುವಂತೆಯೂ ಇತ್ತು. ವಿಜಯನಗರ ಸಾಮ್ರಾಜ್ಯದಿಂದ ಹಿಡಿದು ನಿಜಾಮನ ಕಾಲಘಟ್ಟದವರೆಗೂ ಪಸರಿಸಿದ ರಾಜ್ಯಭಾರದ ಹೆಸರುಗಳಿವು ಎಂದು ಹೇಳುತ್ತಾ, ಆ ಸಮಯದಲ್ಲಿ ತಮಗೆ ಉಂಟಾದ ಅನೇಕ ಅಡೆತಡೆಗಳ ವಿಷಯವನ್ನು ಸ್ವಾರಸ್ಯಕರವಾಗಿ ವಿವರಿಸಿದರು. ಅದರಲ್ಲೂ ಭರತನಾಟ್ಯದಲ್ಲಿ ವಿವಿಧ ಭಂಗಿಗಳ ಮೂಲಕ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆ ವಿನಿಯೋಗಿ ಎಂದು




ಗುರುತಿಸಲಾಗುವ ಅಂಶವನ್ನು ವಿವರಿಸಿದರು.

ಆದರೆ ರಾಜರ ಅರಮನೆಯಲ್ಲಿ ರಾಜನಿಂದ ನಿಯೋಜಿಸಲ್ಪಟ್ಟ ಎಪ್ಪತ್ತೆರಡು ಜನರ ಗುಂಪಿಗೆ ನಿಯೋಗ ಎನ್ನುತ್ತಿದ್ದರು. ರಾಜನಿಗೆ ಸಲಹೆ ನೀಡುವ ಕಾರ್ಯಕ್ಕಾಗಿ ಇವರನ್ನು ನಿಯೋಜಿಸಲಾಗುತ್ತಿತ್ತು. ಇವರೆಲ್ಲಾ ಎಪ್ಪತ್ತೆರಡು ಬಗೆಯ ವಿವಿಧ ಕ್ಷೇತ್ರಗಳ ಅನುಭವಿಗಳು. ಇವರೆಲ್ಲರನ್ನು ನೋಡಿಕೊಳ್ಳುವ ವ್ಯಕ್ತಿಗೆ 'ಬಾಹತ್ತರ ವಿನಯೋಗಿ ಭಟ್ಟಾರಕ' ಎನ್ನುತ್ತಿದ್ದರು. ಈ ವಿನಯೋಗಿಗಳದು ಹೆಚ್ಚಾಗಿ ಲೌಕಿಕ ಕೆಲಸ. ಕಲೆ ಸಾಹಿತ್ಯದಂತಹ ಮಾನಸಿಕ ಕೆಲಸಗಳಿಂದ ಹಿಡಿದು ಕಠಿಣ ಪರಿಶ್ರಮದ ಭೌತಿಕ ಕೆಲಸಗಳವರೆಗೂ ಇದು ಪಸರಿಸಿದೆ ಎಂದು ಆ ಎಲ್ಲಾ ಎಪ್ಪತ್ತೆರಡು ವೃತ್ತಿಗಳ ಪಟ್ಟಿಯನ್ನು ಸಭೆಯ ಮುಂದೆ ಓದಿ ತಿಳಿಸಿದರು. ಪ್ರೊ. ಮಧುಸೂದನ ಅವರು ಅತ್ಯಮೂಲ್ಯ ಸಂಗತಿಗಳನ್ನು ಸಭೆಯ ಮುಂದೆ ಇಟ್ಟದ್ದು ಅಪರೂಪವಾದ ಉಪನ್ಯಾಸವೆನಿಸಿತು. ಒಟ್ಟಿನಲ್ಲಿ 'ಬಾಹತ್ತರ ನಿಯೋಗ' ವಿಷಯ 'ಮಹತ್ತರ' ಅಂಶಗಳ ಪರಿಚಯವನ್ನು ಸಭೆಗೆ ಮಾಡಿಸಿತು.

ಉಪಸ್ಥಿತರಿದ್ದ ಡಾ. ಕೆ.ಆರ್. ಗಣೇಶ್‌ರವರು ಶಾಸನಗಳಲ್ಲೂ ಈ ಬಾಹತ್ತರ ವಿನಿಯೋಗದ ಉಲ್ಲೇಖವಿರುವುದನ್ನು ನೆನಪಿಸಿದರು.

ಅನೇಕ ಸಭಿಕರು ಈ ವಿಷಯದ ಚರ್ಚೆಯಲ್ಲಿ ಭಾಗವಹಿಸಿ ಉಪನ್ಯಾಸಕ್ಕೆ ಮತ್ತಷ್ಟು ಶೋಭೆಯನ್ನು ತಂದುಕೊಟ್ಟರು.

ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ಇವತ್ತಿನ ಪ್ರೊ. ಮಧುಸೂದನ ಅವರ ಉಪನ್ಯಾಸ ನಿಜವಾಗಿಯೂ ಸಾಹಿತಿಗಳ ಕಣ್ಣು ತೆರೆಸುವಂತಾದ್ದು. ಒಂದೇ ಒಂದು ಶಬ್ದವನ್ನು ಹಿಂದಿನ ಸಾಹಿತಿಗಳು ಹೇಗೆ ವಿವಿಧ ಅರ್ಥ ಬರುವಂತೆ ಬಳಸಿಕೊಂಡರು ಎಂಬುದನ್ನು ಬಹಳ ಒತ್ತುಕೊಟ್ಟು ತಿಳಿಸಿದ್ದಾರೆ. ಇದು ಮುಂದಿನ ಪೀಳಿಗೆಯ ಲೇಖಕರಿಗೆ, ಸಂಶೋಧಕರಿಗೆ ಉಪಯುಕ್ತ ದಾರಿದೀಪವಾಗಲಿ ಎಂದು ಹಾರೈಸಿ, ಉಪನ್ಯಾಸಕರನ್ನು ಅಭಿನಂದಿಸಿದರು.

ಗೌರವ ಕೋಶಾಧಿಕಾರಿ ಪ್ರೊ. ಚಂದ್ರಶೇಖರ ನಾದೂರು ವಂದನಾರ್ಪಣೆಯನ್ನು ಸಲ್ಲಿಸಿದರು.

## ದಿನಾಂಕ ೨೧/೦೮/೨೦೨೫ ಗುರುವಾರ ಸಂಜೆ ನಡೆದ
## ಶ್ರೀಮತಿ ರುಕ್ಮಿಣಮ್ಮ ಶ್ರೀ ಸೀತಾರಾಮರಾವ್ ದತ್ತಿ ಉಪನ್ಯಾಸ

**ಉಪನ್ಯಾಸಕರು:** ಶ್ರೀ ಸತ್ಯೇಶ್ ಬೆಳ್ಳೂರ್, ಕವಿ, ಚಿಂತಕರು, ಮ್ಯಾನೇಜ್ಮೆಂಟ್ ಗುರು, **ವಿಷಯ:** ಡಿ.ವಿ.ಜಿ.ಯವರ 'ಉಮರನ ಒಸಗೆ'.

ಡಾ. ಮಾರುತಿ ರಾಮ್ ಅವರು ಡಿ.ವಿ.ಜಿ.ಯವರ ಕೆಲವು ಗೀತೆಗಳನ್ನು ಹಾಡುವುದರೊಂದಿಗೆ ಉಪನ್ಯಾಸ ಕಾರ್ಯಕ್ರಮ ಪ್ರಾರಂಭವಾಯಿತು.

ದತ್ತಿ ದಾನಿಗಳ ಕುಟುಂಬಸ್ಥರು, ಉಪನ್ಯಾಸಕರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರೂ ಸೇರಿದಂತೆ ಕೆಲವರು ಶ್ರೀಮತಿ ರುಕ್ಮಿಣಮ್ಮ ಶ್ರೀ ಸೀತಾರಾಮರಾವ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಹಸ್ತಲಿಪಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಹಿನ್ನಲೆಯನ್ನು ಸಂಕ್ಷಿಪ್ತವಾಗಿ ಸಭಿಕರಿಗೆ ಪರಿಚಯಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕಾರೀ ಮಂಡಳಿಗೆ ನೂತನವಾಗಿ ಆಯ್ಕೆಯಾಗಿರುವ ಶ್ರೀ ರಾಮಲಿಂಗೇಶ್ವರ(ಸಿಸಿರಾ) ಅವರು ಸಭಿಕರನ್ನು ಮತ್ತು ವೇದಿಕೆಯ ಗಣ್ಯರನ್ನು ಸ್ವಾಗತಿಸುವುದರೊಂದಿಗೆ, ಉಪನ್ಯಾಸಕರಾದ ಶ್ರೀ ಸತ್ಯೇಶ್ ಬೆಳ್ಳೂರ್ ಅವರ ಪರಿಚಯವನ್ನು ಮಾಡಿಕೊಟ್ಟರು.

ಶ್ರೀಯುತ ಸತ್ಯೇಶ್ ಬೆಳ್ಳೂರ್ ಅವರು ಡಿ.ವಿ.ಜಿ.ಯವರ 'ಉಮರನ ಒಸಗೆ' ಬಗ್ಗೆ ಚಿಂತನೆಯನ್ನು ಮಾಡುತ್ತಾ, ಇದೊಂದು ಕಾವ್ಯ, ಸಮಯದ ಪರಿಮಿತಿಯೊಳಗೆ ಎಲ್ಲವನ್ನೂ ಹೇಳುವುದು ಅಸಾಧ್ಯ ಎನ್ನುತ್ತಾ, ಮೊದಲು ಈ ಪುಸ್ತಕದ ಪ್ರಸ್ತಾವನೆಯಲ್ಲಿರುವ ಚೌಪದಿಯ ವಿಶ್ಲೇಷಣೆಯನ್ನು ಮಾಡಿದರು. ಉಮರ ಪಾರಸಿಕ ಸಂಸ್ಕೃತಿಯನ್ನು ತನ್ನ ಕಾವ್ಯಗಳಲ್ಲಿ ಎತ್ತಿ ತೋರಿಸಿದ್ದಾನೆ. ಇದರ ಆಂಗ್ಲ ಅನುವಾದದ ಅನುವಾದವನ್ನು ಡಿ.ವಿ.ಜಿ.ಯವರು ಮಾಡುತ್ತಾ ಈ ರೇಶಿಮೆ ಸರಬಂಧವನ್ನು ದೇವಿ ಸರಸ್ವತಿಗೆ ಅರ್ಪಿಸುತ್ತೇನೆ ಎಂದಿದ್ದಾರೆ.

**ಉಮರ್ ಖಯ್ಯಾಮ್ ಆಕಸ್ಮಿಕ ಕವಿ**

ಈಗಿನ ಇರಾನ್ ದೇಶದಲ್ಲಿದ್ದ ಕವಿ ಉಮರ್ ಖಯ್ಯಾಮ್, ಇದು ಅವನ ಉದ್ದದ ಹೆಸರಿನ ಪುಟ್ಟ ಅವತರಣ. ಅವನು ಒಬ್ಬ ಆಕಸ್ಮಿಕ ಕವಿ. ನಿಜವಾಗಿ ಗಣಿತ ಮತ್ತು ಖಗೋಳಶಾಸ್ತ್ರಜ್ಞ, ಅವನು ತನ್ನ ವಿದ್ಯಾರ್ಥಿಗಳನ್ನು ರಮಿಸಲು ಹಾಡುತ್ತಿದ್ದ ನಾಲ್ಕು ಸಾಲುಗಳ ಪದ್ಯ. ಅವರ ಭಾಷೆಯಲ್ಲಿ ಇದು 'ರುಬಾಯತ್'. ಪದ್ಯದ ೧, ೨ ಹಾಗೂ ೪ನೇ ಸಾಲಿನಲ್ಲಿ ಅಂತ್ಯಪ್ರಾಸ ಇರುವಂತಹುದು. ಆದರೆ ಡಿ.ವಿ.ಜಿ.ಯವರು ನಮ್ಮ ಪದ್ಧತಿಗೆ ಹೊಂದಿಸಲು ಈ ಅಂತ್ಯಪ್ರಾಸಗಳನ್ನು ಬಳಸಿಲ್ಲ. ಹೀಗೆ ಹೇಳುತ್ತಾ ಡಿ.ವಿ.ಜಿ.ಯವರ ಉಮರನ ಒಸಗೆಯ ೧೭೨ ಅನುವಾದಗಳಲ್ಲಿ ಕೆಲವೊಂದು ಚೌಪದಿಗಳನ್ನು ಓದಿ ಅದರ ವ್ಯಾಖ್ಯಾನವನ್ನು ಬಹಳ




ಸಮಂಜಸವಾಗಿ ಸತ್ಯೇಶ್ ಬೆಳ್ಳೂರ್ ಅವರು ಮಾಡಿದರು. ಜೊತೆಗೆ, ಡಿ.ವಿ.ಜಿ.ಯವರು ಬರೆದ 'ಮಂಕುತಿಮ್ಮನ ಕಗ್ಗ'ದ ಆಗಿನ ಕೆಲವು ಸ್ವಾರಸ್ಯಕರ ಘಟನೆಗಳ ಮೆಲುಕು ಹಾಕಿ ಸಭಿಕರನ್ನು ಹಾಸ್ಯಗಡಲಿನಲ್ಲಿ ತೇಲಿಸಿದರು. ಡಿ.ವಿ.ಜಿ. ಅವರು ಬರೆದ ಕಾಲಮಾನದಲ್ಲಿ ಅದಕ್ಕೆ ಅಷ್ಟು ಮನ್ನಣೆ ಸಿಗದೇ ಇದ್ದರೂ ಈಗ ಅದು ಪ್ರಮುಖ ಮುಕ್ತಕಗಳಲ್ಲಿ ಒಂದಾಗಿ, ಪುಂಖಾನುಪುಂಖವಾಗಿ ಅದರ ಮೇಲೆ ವಿಶ್ಲೇಷಣೆಗಳು, ವಿವರಣೆಗಳು ದೊರೆಯುತ್ತಿರುವುದು ಸಂತೋಷದ ವಿಷಯವಾದ ಹಾಗೇ ಪ್ರಖ್ಯಾತವಾಗುತ್ತಿರುವುದು, ಅದರಲ್ಲಿ ಅಡಗಿರುವ ತತ್ವದ ಮಹತ್ತು ಮಜ್ಜಿಗೆಯೊಳಗಿನ ಬೆಣ್ಣೆಯಂತೆ ಎದ್ದು ಕಾಣುತ್ತಿದೆ ಎಂದರು.

**ಮೌಲ್ಯಾಧಾರಿತ ಕೃತಿಗಳು**

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ, ಇಂದಿನ ಶ್ರೀ ಸತ್ಯೇಶ್ ಬೆಳ್ಳೂರ್ ಅವರ ಉಪನ್ಯಾಸ ಅತ್ಯಂತ ಉತ್ಕೃಷ್ಟವಾಗಿತ್ತು. ಡಿ.ವಿ.ಜಿ.ಯವರ 'ಉಮರನ ಒಸಗೆ' ವಿಷಯವಾಗಿ ಕೇವಲ ೪೫ ನಿಮಿಷಗಳಲ್ಲಿ ಮಾತನಾಡುವುದು ಸುಲಭ ಸಾಧ್ಯವಲ್ಲ. ಉಪನ್ಯಾಸಕರು ಮ್ಯಾನೇಜ್ಮೆಂಟ್ ಗುರು ಆದ್ದರಿಂದ ಇದು ಸಾಧ್ಯ. 'ಉಮರನ ಒಸಗೆ' ಒಂದು ಛಂದೋಬದ್ಧವಾದ ಮಹಾನ್ ಕಾವ್ಯ. ಇಂತಹ ಮೌಲ್ಯಾಧಾರಿತ ಕಾವ್ಯಗಳನ್ನು ನಾವು ಸೂಫಿ ಕವಿಯ 'ರೂಮಿ', ನಮ್ಮಲ್ಲೇ ಶಿಶುನಾಳ ಶರೀಫರ ಗೀತೆಗಳಲ್ಲೂ ಕಾಣಬಹುದು. ಜನರ ನೈತಿಕ ಗುಣಮಟ್ಟವನ್ನು ಉನ್ನತಗೊಳಿಸಲು ಸಹಾಯಕವಾಗುವ ಒಂದು ತರಹದ ಭಾವಗೀತೆಗಳಿವು. ಉಮರ್ ಖಯ್ಯಾಮ್‌ನ ಅಂತಹ ಗೀತೆಗಳಿಗೆ ಮಾರುಹೋಗಿ, ಅದರ ಆಂಗ್ಲ ಅನುವಾದವನ್ನು ಕನ್ನಡಕ್ಕೆ ಡಿ.ವಿ.ಜಿ.ಯವರು ಮಾಡಿದ್ದಾರೆ ಎಂದರೆ, ಅದು ಉಮರ್ ಖಯ್ಯಾಮ್‌ನ ಗೀತೆಗಳ ಆಧ್ಯಾತ್ಮಿಕತೆಗೆ ಸಿಕ್ಕ ಗೌರವ. ಅನುವಾದ ಮಾಡುವಾಗ ಅವರವರ ಸಂಸ್ಕೃತಿಗೆ ತಕ್ಕಂತೆ ರೂಪಿಸುಕೊಂಡು ಮಾಡಿರುವುದು ಭಾಸವಾಗುತ್ತದೆ. ಇದು ಸಹಜ ಎಂದರು.

ಕೋಶಾಧಿಕಾರಿಗಳಾದ ಪ್ರೊ.ಚಂದ್ರಶೇಖರ ನಾದೂರು ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ದಿನಾಂಕ ೨೯/೦೮/೨೦೨೫ ಶುಕ್ರವಾರ ಸಂಜೆ ನಡೆದ ೨೬ನೇ ಹಳಗನ್ನಡ ರಸಗ್ರಹಣ ತರಗತಿಗಳ ಸಮಾರೋಪ ಹಾಗೂ ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರ 'ರಾಷ್ಟ್ರಕೂಟ ರಾಜ್ಯ' ಪುಸ್ತಕ ಲೋಕಾರ್ಪಣೆ ಸಮಾರಂಭ

**ದಾಖಲೆ ನಿರ್ಮಾಣ**

ಹಸ್ತಲಿಪಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು ಪ್ರಸ್ತಾವನೆ ಮಾಡುತ್ತಾ, ಇಂದಿನ ಈ ಹಳಗನ್ನಡ ರಸಗ್ರಹಣ ತರಗತಿಯಲ್ಲಿ ೮೬ ವಿದ್ಯಾರ್ಥಿಗಳು ಇದ್ದದ್ದು ಒಂದು ದಾಖಲೆಯಾಗಿದೆ. ನಿವೃತ್ತರು, ಅಭಿಯಂತರರು, ಅಧಿಕಾರಿಗಳು, ಉದ್ಯೋಗಿಗಳು, ಹೀಗೆ ಸಮಾಜದ ನಾನಾ ಹವ್ಯಾಸಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಮತ್ತು ಮಹನೀಯರು, ಕಿರಿಯ ವಯಸ್ಸಿನಿಂದ ಹಿಡಿದು ವಯೋವೃದ್ಧರೂ ಇರುವುದು, ಈ ಹಳಗನ್ನಡದಲ್ಲಿ ಅಡಕವಾಗಿರುವ ಸವಿರಸವೋ, ನಮ್ಮಲ್ಲಿ ಸಿದ್ಧವಾಗುವ ಪಠ್ಯಕ್ರಮದ ಪರಿಮಳವೋ, ಪಾಠಗಳನ್ನು ಪ್ರಸ್ತುತ ಪಡಿಸುವ ನುರಿತ ಶಿಕ್ಷಕರೋ ಮೇಣ್ ಇವೆಲ್ಲದರ ಸಮ್ಮಿಶ್ರಣದ ಫಲವೋ ಎಂದರು.

ನಂತರ ಡಾ. ಮಾರುತಿ ರಾಮ್ ಅವರಿಂದ ಪ್ರಾರ್ಥನೆ ನಡೆಯಿತು.

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ವೇದಿಕೆಯ ಗಣ್ಯರಿಗೆ, ಪ್ರತ್ಯಕ್ಷವಾಗಿ ನೆರೆದ ಮತ್ತು ಅಂತರ್ಜಾಲದ ಎಲ್ಲಾ ವೀಕ್ಷಕರಿಗೂ ಸ್ವಾಗತ ಕೋರಿದರು.

**ಸಾಹಿತ್ಯಕ್ಕೂ ಒಂದು ಇತಿಹಾಸ ಬೇಕು**

ಹಾಗೇ ಇತ್ತೀಚಿಗೆ ಪ್ರಾರಂಭಿಸಿರುವ ಪುಸ್ತಕ ಲೋಕಾರ್ಪಣೆ ಸರಣಿಯಲ್ಲಿ ಇಂದು ಡಾ. ಶ್ಯಾಮಲಾ ರತ್ನಕುಮಾರಿ ವಿರಚಿತ 'ರಾಷ್ಟ್ರಕೂಟ ರಾಜ್ಯ'ವನ್ನು ಬಿಡುಗಡೆ ಮಾಡುತ್ತಿದ್ದೇವೆ, ಇದು ನಾವು ಕಲ್ಪಿಸಿಕೊಂಡ ಸಾಹಿತ್ಯ ಮತ್ತು ಇತಿಹಾಸದ ಸಮ್ಮಿಲನ. ಏಕೆಂದರೆ ಸಾಹಿತ್ಯಕ್ಕೂ ಒಂದು ಇತಿಹಾಸ ಇರಲೇಬೇಕು ಎಂದರು.

**ಸಾಹಿತ್ಯ ಆಧಾರಿತ ಕೃತಿ**

'ರಾಷ್ಟ್ರಕೂಟ ರಾಜ್ಯ' ಪುಸ್ತಕದ ಬಗ್ಗೆ ಮಾತನಾಡುತ್ತಾ ಅತಿಥಿಗಳಾದ ಶಾಸನ ತಜ್ಞ ಡಾ. ಪಿ.ವಿ. ಕೃಷ್ಣಮೂರ್ತಿ ಅವರು, ಹಿಂದಿನಿಂದ ಅನೇಕರು ಈ ರೀತಿ ಕೃತಿಗಳ ರಚನೆ ಮಾಡುವಾಗ ಲಭ್ಯವಿರುವ ಶಾಸನಗಳ ಆಧಾರ ಮಾಡಿಕೊಳ್ಳುತ್ತಿದ್ದರು. ಆದರೆ ಇವತ್ತಿನ ಈ ಪುಸ್ತಕದ ಹಿರಿಮೆ ಎಂದರೆ ಮೂಲವಾಗಿ ಇದು



ಸಾಹಿತ್ಯ ಆಧಾರಿತ ಕೃತಿ. ಅವಶ್ಯಕತೆ ಇದ್ದಲ್ಲಿ ಶಾಸನಗಳ ಬಳಕೆಯನ್ನು ಲೇಖಕಿ ಮಾಡಿಕೊಂಡಿದ್ದಾರೆ, ಇದೊಂದು ಅಪರೂಪದ ಪ್ರಯೋಗ ಎಂದರು. ಹಿಂದೆ ನಮಗೆ ದೊರೆತ ಅನೇಕ ಇಂತಹ ಕೃತಿಗಳು ಆಂಗ್ಲರು ಹೇಳಿದಂತೆ ಬರೆದಂತಹವು. ಈ ನಿಟ್ಟಿನಲ್ಲೂ ಲೇಖಕಿ ಈ ದಾರಿಯನ್ನು ಆರಿಸಿಕೊಂಡಿಲ್ಲ ಎಂಬ ಅಂಶವನ್ನು ನಾವು ಮನಗಾಣಬಹುದು, ಇದರಲ್ಲಿ ಭಾರತೀಯತೆಯ ಸೊಗಡನ್ನು ಕಾಣಬಹುದು ಎಂದರು.

**ಮಾಯವಾಗುತ್ತಿರುವ ಹಳಗನ್ನಡ**

ನಂತರ ಮಾತನಾಡಿದ ಗೌರವಾಧ್ಯಕ್ಷರಾದ ಡಾ. ಲಕ್ಷ್ಮೀನಾರಾಯಣ ಅವರು ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಆದಿಕವಿ ಪಂಪನ ವರ್ಚಸ್ಸಿನ ಮೇಲೆ ಪ್ರಮುಖವಾಗಿ ಬೆಳಕು ಚೆಲ್ಲಿದರು. ಹಳಗನ್ನಡದ ಬಗೆಗೆ ಮಾತನಾಡುತ್ತಾ ಇಂದಿನ ದಿನಗಳಲ್ಲಿ ಚಾಲನೆಯಲ್ಲಿರುವ ಶಿಕ್ಷಣ ಪದ್ಧತಿಯಲ್ಲಿ 'ಹಳಗನ್ನಡ' ಮಾಯ ವಾಗಿರುವುದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

**ಶಾಸನಗಳ ಅಧ್ಯಯನ ಮತ್ತು ಹಳಗನ್ನಡದ ಜ್ಞಾನ ಒಬ್ಬ ವ್ಯಕ್ತಿಯ ಪರಿಪೂರ್ಣತೆಗೆ ದ್ಯೋತಕ**

ಮುಖ್ಯ ಅತಿಥಿ ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು, ಈ ರಾಷ್ಟ್ರಕೂಟ ಆಡಳಿತ ಪ್ರಾರಂಭವಾದದ್ದು ಲಾತೂರ್ ಮತ್ತು ಒಸ್ಮಾನಾಬಾದ್ ಭಾಗದಿಂದ. ಮುಂದೆ ಅದು ಬಾದಾಮಿಯ ಕಡೆ ಪಸರಿಸಿತ್ತು, ದಕ್ಷಿಣದ ಕೆಲವು ಭಾಗಗಳಿಗೆ ವಿಸ್ತರಿಸಿತು ಎಂಬ ವಿಷಯವನ್ನು ತಿಳಿಸುತ್ತಾ, ಹಲವು ಅಮೂಲ್ಯ ಚಾರಿತ್ರಿಕ ಸಂಗತಿಗಳನ್ನು ಪ್ರಸ್ತಾಪಿಸಿದರು. ಜೊತೆಗೆ ಪಂಪನಿಂದ ಹಿಡಿದು ಪೊನ್ನನವರೆಗೆ ಲಭ್ಯವಿರುವ ಸಾಹಿತ್ಯದ ಸಂಗತಿಗಳನ್ನೂ ತಿಳಿಸಿದರು, ಇಂತಹ ಅನೇಕ ವಿಷಯಗಳನ್ನೊಳಗೊಂಡ ಡಾ. ಶ್ಯಾಮಲಾ ರತ್ನಕುಮಾರಿ ಅವರ ಈ ಪುಸ್ತಕ ಉಪಯುಕ್ತ ನಿಧಿ. ಶಾಸನಗಳ ಅಧ್ಯಯನ ಮತ್ತು ಹಳಗನ್ನಡದ ಜ್ಞಾನ ಒಬ್ಬ ವ್ಯಕ್ತಿಗೆ ಪರಿಪೂರ್ಣತೆಯನ್ನು ತಂದುಕೊಡುತ್ತದೆ ಎಂಬುದು ನನ್ನ ಭಾವನೆ ಎಂದರು.

**'ರಾಷ್ಟ್ರಕೂಟ ರಾಜ್ಯ' ಕೃತಿ ಲೇಖಕಿಯ ನುಡಿ**

ಇಂದು ಲೋಕಾರ್ಪಣೆಗೊಂಡ 'ರಾಷ್ಟ್ರಕೂಟ ರಾಜ್ಯ' ಕೃತಿಯ ಲೇಖಕಿ ಶ್ಯಾಮಲ ರತ್ನಕುಮಾರಿ ಕೆಲವು ನುಡಿಗಳನ್ನು ಆಡಿದರು. ನನ್ನ ಸಂಶೋಧನೆಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಗ್ರಂಥಾಲಯವನ್ನು ನಾನು ಪ್ರಮುಖವಾಗಿ ಬಳಸಿಕೊಂಡಿದ್ದೇನೆ. ಇಂದು ಲೋಕಾರ್ಪಣೆ ಗೊಂಡ ಪುಸ್ತಕಕ್ಕೆ ಬೆನ್ನೆಲುಬು ಆಗಿದ್ದವರು ಕರ್ನಾಟಕ ಇತಿಹಾಸ ಅಕಾಡೆಮಿಯ ಸ್ಥಾಪಕರಾದ ಇತಿಹಾಸ ತಜ್ಞ ಡಾ. ಜಿ.ಎಸ್. ದೀಕ್ಷಿತ್ ಅವರು. ರಾಷ್ಟ್ರಕೂಟ ರಾಜ್ಯದ ರಾಜರುಗಳ ಆಳ್ವಿಕೆಯಲ್ಲಿ ಇದ್ದಂತಹ

ಸ್ವರೂಪ ಮತ್ತು ಆಡಳಿತ ವೈಖರಿಯ ಬಗೆಗೆ ಒತ್ತುಕೊಡುವಂತೆ ಸೂಚಿಸಿದವರು ಅವರೇ ಎಂದರು. ತಮ್ಮ ಕೃತಿಯನ್ನು ಪ್ರಕಟಣೆ ಮಾಡಲು ಸಮ್ಮತಿಸಿದ ಮತ್ತು ಇಂದು ಲೋಕಾರ್ಪಣೆ ಮಾಡಿಸಿದ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

**ರಸಗ್ರಹಣ ಪ್ರಮಾಣ ಪತ್ರ ವಿತರಣೆ**

ನಂತರ ರಸಗ್ರಹಣ ಶಿಬಿರದ ಕೆಲವು ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ತದನಂತರ ಉಪಸ್ಥಿತರಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ರಸಗ್ರಹಣ ಸಂಪೂರ್ಣತೆಯ ಪ್ರಮಾಣಪತ್ರಗಳನ್ನು ನೀಡಲಾಯಿತು.



**ಕಲಿಕೆಯಲ್ಲಿ ಸಂವಾದದ ಪಾತ್ರ**

ಅಧ್ಯಕ್ಷೀಯ ನುಡಿಗಳನ್ನಾಡಿದ ಡಾ. ಬೈರಮಂಗಲ ರಾಮೇಗೌಡ ಅವರು ೨೫ ವರ್ಷದಿಂದ ಸುಮಾರು ೯೦ರ ವಯೋಮಾನದ ಆಸುಪಾಸಿನವರು ಈ ವರ್ಷದ ರಸಗ್ರಹಣದ ಕಲಿಕಾರ್ಥಿಗಳಾಗಿ ಬಂದಿರುವುದು ಸಂತೋಷದ ವಿಷಯ. ನಿಮ್ಮನ್ನೆಲ್ಲಾ ನಾನು ಅಭಿನಂದಿಸುತ್ತೇನೆ ಎಂದರು. ಕೇವಲ ೯೦ ನಿಮಿಷಗಳ ಕಾಲ ನಾವು ಹೇಳಬೇಕಾದ್ದನ್ನು ಹೇಳಿದರೆ ಸಾಲದು. ನಾವು ಕಲಿಸಿದ್ದನ್ನು ಯಾವ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಗ್ರಹಿಸಿದ್ದಾರೆ ಎಂದು ಅರಿಯಲು, ಒಂದು ೧೦ ನಿಮಿಷಗಳ ಕಾಲ 'ಸಂವಾದ' ಮಾಡಿದರೆ ಉಪಯುಕ್ತ ಆಗುವುದೆಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಕಲಿಕೆ ಕಲಿಸಿದವರಿಗೂ, ಕಲಿಯುವವರಿಗೂ ಸಾರ್ಥಕವಾದಾಗಲೇ ಇಂತಹ ಪರಿಶ್ರಮಕ್ಕೆ ಬೆಲೆ ಎಂಬ ನುಡಿಮುತ್ತುಗಳನ್ನು ಆಡಿದರು.

ಕರ್ನಾಟಕದ ಯಾವುದೇ ಭಾಗದಲ್ಲಾಗಲಿ ಸಾಹಿತ್ಯೋತ್ಸವ ನಡೆದಾಗ ಅದರಲ್ಲಿ ವಿಶೇಷವಾಗಿ 'ಹಳಗನ್ನಡ'ದ ವಿಷಯವೂ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು ಎಂಬ ಗಂಭೀರ ಮಾತನ್ನು ಮುಂದಿಟ್ಟರು.

ನಿರೂಪಣೆಯನ್ನು ನೆರವೇರಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಮಲಿಂಗೇಶ್ವರ (ಸಿಸಿರಾ) ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೩೧/೦೮/೨೦೨೫ ಭಾನುವಾರ ಬೆಳಗ್ಗೆ ನಡೆದ ಶ್ರೀ ಕೆ. ಮೋಹನ್ ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಮಹಾಮಾನವ ಅಗೋಳಿ ಮಂಜಣ್ಣ ದತ್ತಿ, ಬೆ.ಸು.ನಾ. ಮಲ್ಯ ದತ್ತಿ 'ಪ್ರಶಸ್ತಿ ಪ್ರದಾನ ಸಮಾರಂಭ' ಮತ್ತು ಶ್ರೀ ಗುಮ್ಮಡಿ ವಿಠ್ಠಲರಾವ್ ಗದ್ದಾರ್ ದತ್ತಿ, ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ದತ್ತಿ ಆಶಯದಲ್ಲಿ 'ಭಕ್ತಿಗೀತೆ ಮತ್ತು ವೈಚಾರಿಕ ಗೀತೆ ಗಾಯನ ಸ್ಪರ್ಧೆ'.

ಗೌರವ ಕೋಶಾಧಿಕಾರಿ ಪ್ರೊ. ಚಂದ್ರಶೇಖರ ನಾದೂರು ಇವರ ನಿರೂಪಣೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಹಸ್ತಲಿಪಿ ಸಂರಕ್ಷಕರಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು ದತ್ತಿಗಳ ಸಮಗ್ರ ಪರಿಚಯವನ್ನು ಮಾಡಿಕೊಟ್ಟರು. ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಗಣ್ಯರನ್ನು, ಪ್ರಶಸ್ತಿ ಪುರಸ್ಕೃತರನ್ನು, ಗಾಯನ ಸ್ಪರ್ಧೆಯ ತೀರ್ಪುಗಾರರನ್ನು ಮತ್ತು ಸ್ಪರ್ಧಿಗಳನ್ನು ಪೋಷಕರ ಸಮೇತವಾಗಿ ಸ್ವಾಗತಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮುಖ್ಯ ಅತಿಥಿಗಳಾದ ಶ್ರೀ ಮೋಹನ್ ದೇವ್ ಆಳ್ವ ಅವರು ದತ್ತಿಗೆ ಸಂಬಂಧಿಸಿದ ವ್ಯಕ್ತಿಗಳ ಬಗ್ಗೆ ವಿವರಗಳನ್ನು ನೀಡಿ, ಪ್ರಶಸ್ತಿಗಳನ್ನು ಇಡಲು ಕಾರಣ ಮತ್ತು ಭಕ್ತಿಹಾಗೂ ವೈಚಾರಿಕ ಗಾಯನಗಳ ಸ್ಪರ್ಧೆ ಏರ್ಪಡಿಸಿದ ಉದ್ದೇಶವನ್ನು ತಿಳಿಸಿ, ಸ್ಪರ್ಧಿಗಳಿಗೆ ಕೆಲವು ಹಿತವಚನಗಳನ್ನು ನುಡಿದರು.

**ದೈಹಿಕ ಸದೃಢತೆಯ ಅವಶ್ಯಕತೆ**

ಅಗೋಳಿ ಮಂಜಣ್ಣ ಪ್ರಶಸ್ತಿ ಪುರಸ್ಕೃತರಾದ ಕ್ರೀಡಾಪಟು ಶ್ರೀ ಡಿ. ಚಂದ್ರಹಾಸ ರೈ ಅವರು ಮಾತನಾಡುತ್ತಾ, ತಮಗೆ ಸರಕಾರದ ವತಿಯಿಂದ ಮತ್ತು ಇತರ ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಬಂದಿದ್ದರೂ, ಇವತ್ತಿನ ಪ್ರಶಸ್ತಿ ವಿಶೇಷವಾದದ್ದು. ನನಗೆ ಆಳ್ವ ಕುಟುಂಬ ಚೆನ್ನಾಗಿ ಪರಿಚಿತ. ಶ್ರೀಮಂತರಾಗಿದ್ದರೂ ಅತ್ಯಂತ ದಯಾಳುಗಳು. ಆ ಕುಟುಂಬದ ಗೌರವಾನ್ವಿತ ಮೋಹನ್ ದೇವ್ ಆಳ್ವ ಅವರ ಹಸ್ತದಿಂದ ಪ್ರಶಸ್ತಿ ಪಡೆಯುವುದು ನನ್ನ ಪುಣ್ಯ. ಇಲ್ಲಿ ಅನೇಕ ಸಂಗೀತಜ್ಞರು ಇದ್ದೀರಿ. ನಿಮ್ಮ ಕುಶಲತೆಗೆ ದೈಹಿಕ ಸದೃಢತೆ ಬಹು ಮುಖ್ಯ. ಯಾರು ದೈಹಿಕವಾಗಿ ಬಲಶಾಲಿಯಾಗಿ ಇರುತ್ತಾರೋ, ಅವರು ಆರೋಗ್ಯವಾಗಿರುವ ಸಾಧ್ಯತೆ ಹೆಚ್ಚು. ಸಂಗೀತದ ಜೊತೆಗೆ ಸ್ವಲ್ಪ ಗಮನವನ್ನು ಕ್ರೀಡೆಗಳ ಕಡೆಗೂ ಹರಿಸಿ ಆರೋಗ್ಯವಂತರಾಗಿ ಎಂದರು.

**ಇದು ‘ವಿಕ್ರಮ’ ವಾರಪತ್ರಿಕೆಗೆ ದೊರೆತ ಪ್ರಶಸ್ತಿ**



ಬೆ.ಸು.ನಾ. ಮಲ್ಯ ಪ್ರಶಸ್ತಿ ಪುರಸ್ಕೃತರಾದ, ‘ವಿಕ್ರಮ’ ವಾರಪತ್ರಿಕೆಯ ಸಂಪಾದಕರಾದ ಶ್ರೀ ರಮೇಶ ದೊಡ್ಡಪುರ ಅವರು ಮಾತನಾಡುತ್ತಾ, ನಾನು ಈ ಪ್ರಶಸ್ತಿಯನ್ನು ಪಡೆಯುವ ಸಾಧನೆಯನ್ನು ಇನ್ನೂ ಮಾಡಿಲ್ಲ ಹಾಗೂ ಅಂತಹ ದೊಡ್ಡ ವ್ಯಕ್ತಿಯೂ ಅಲ್ಲ. ಆದ್ದರಿಂದ ಈ ಪ್ರಶಸ್ತಿ ನನಗಿಂತ ನಮ್ಮ ವಾರಪತ್ರಿಕೆ ‘ವಿಕ್ರಮ’ಕ್ಕೆ ಬಂದಿದೆ ಎಂದು ಭಾವಿಸುತ್ತೇನೆ. ಮುಳುಗುತ್ತಿದ್ದ ‘ವಿಕ್ರಮ’ ಪತ್ರಿಕೆಯನ್ನು ಮೇಲೆತ್ತಿ ನಡೆಸಿದ ಮಲ್ಯರ ಬಗೆಗೆ ಲೇಖನ ಪ್ರಕಟಿಸಲು ನಾನು ಮಾಡುತ್ತಿರುವ ಶ್ರಮವನ್ನು ಮನಗಂಡು ಇಂದು ಈ ಪ್ರಶಸ್ತಿ ನೀಡಲಾಗಿದೆ ಎಂದುಕೊಳ್ಳುತ್ತಾ ಪ್ರಶಸ್ತಿ ದಯಪಾಲಿಸಿದ ಈ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಚಂದ್ರಶೇಖರ ನಾದೂರು ಇವರ ವಂದನಾರ್ಪಣೆಯೊಂದಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮುಕ್ತಾಯವಾಗಿ ಗಾಯನ ಸ್ಪರ್ಧೆಗಳು ಪ್ರಾರಂಭವಾಯಿತು.

ಭಕ್ತಿ ಗೀತೆ ಮತ್ತು ವೈಚಾರಿಕೆ ಗೀತೆ ವಿಭಾಗಗಳಲ್ಲಿ ಒಟ್ಟು ೩೩ ಸ್ಪರ್ಧಿಗಳು ಗಾಯನ ಮಾಡಿದರು. ಅದರಂತೆ ತೀರ್ಪುಗಾರರು ನೀಡಿದ ನಿರ್ಣಯದ ಆಧಾರದ ಮೇಲೆ ಬಹುಮಾನಗಳನ್ನು ನೀಡಲಾಯಿತು.

ಆಯಾ ವಿಭಾಗಗಳಲ್ಲಿ ಈ ಕೆಳಕಂಡವರು ಬಹುಮಾನ ಪಡೆದರು:

**ಭಕ್ತಿ ಗೀತೆ ಗಾಯನ ವಿಭಾಗ**

| | |
|---|---|
| **೧.ಭುವನ ಎ.**– ಮೊದಲನೇ ಬಹುಮಾನ | ೪,೦೦೦/– |
| **೨.ಅಭಿನವ್ ಶ್ರೀನಿಧಿ ತಾಯೂರು**– ಎರಡನೇ ಬಹುಮಾನ | ೩,೦೦೦/– |
| **೩.ಲಹರಿ ಶಾಸ್ತ್ರೀ**– ಮೂರನೇ ಬಹುಮಾನ | ೨,೦೦೦/– |
| ಸಮಾಧಾನಕರ ಬಹುಮಾನ – **ರಾಘವೇಶ ಬಿ.** | ೫೦೦/– |

**ವೈಚಾರಿಕೆ ಗೀತೆ ಗಾಯನ ವಿಭಾಗ**

| | |
|---|---|
| **೧.ಮಾನ್ಸಿ ಯು.ಎಸ್. ಆಚಾರ್** – ಮೊದಲನೇ ಬಹುಮಾನ | ೪,೦೦೦/– |
| **೨.ಭುವನ ಎ.** – ಎರಡನೇ ಬಹುಮಾನ | ೩,೦೦೦/– |
| **೩.ಶರಣ್ಯ ಭಟ್ ಎಸ್.ಎಸ್.** – ಮೂರನೇ ಬಹುಮಾನ | ೨,೦೦೦/– |
| ಸಮಾಧಾನಕರ ಬಹುಮಾನ – **ನಕ್ಷ ಟಿ. ಅರಸ್** | ೫೦೦/– |

ಬಹುಮಾನ ವಿತರಣೆಯ ನಂತರ ಮಾತನಾಡಿದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಇಂದಿನ ಸ್ಪರ್ಧೆಗಳಿಂದ ಹೊಮ್ಮಿದ ಮುಖ್ಯ ವಿಷಯವೆಂದರೆ, ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಗೀತ ಕ್ಷೇತ್ರದ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ಸ್ವತಂತ್ರವಾಗಿ ನಿರ್ಮಿಸಿಕೊಳ್ಳಬಹುದು ಎನ್ನುತ್ತಾ ವಿಜೇತರನ್ನು ಅಭಿನಂದಿಸಿದರು.

ವೈಚಾರಿಕ ಗೀತೆಗೆ ಶ್ರೀಮತಿ ರೇಖಾ ವಿ., ಶ್ರೀ ಹೇಮಾದ್ರಿ ಎಸ್. ಮತ್ತು ಭಕ್ತಿಗೀತೆಗೆ ಶ್ರೀ ಫಣೀಂದ್ರ ಶರ್ಮ, ಶ್ರೀಮತಿ ಎಂ.ಎಸ್. ಸಂಜನಾ ರಾವ್ ಅವರು ತೀರ್ಪುಗಾರರಾಗಿದ್ದು ಸ್ಪರ್ಧೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.



**ಬಹುಮಾನಿತರು**



**ಸ್ಪರ್ಧಾಳುಗಳು**



# ಬಿ.ಎಂ.ಶ್ರೀಕಂಠಯ್ಯ

## ೯. ಭಾಷಣ ಮೀಮಾಂಸೆ

ಮುಂದುವರೆದ ಭಾಗ...

ಡಾ. ರಾಮೇಗೌಡ (ರಾಗೌ)

ಪಾಶ್ಚಾತ್ಯರಲ್ಲಿ ಕಾವ್ಯ ಮೀಮಾಂಸೆ, ಸೌಂದರ್ಯ ಮೀಮಾಂಸೆ ಮತ್ತು ಭಾಷಣ ಮೀಮಾಂಸೆಗಳು ವ್ಯವಸ್ಥಿತವಾಗಿ ಬೆಳೆದು ಬಂದಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯ. ಆದರೆ ಭಾರತದ ಸಂದರ್ಭದಲ್ಲಿ ಮೊದಲೆರಡು ಬೆಳೆದಂತೆ ಕೊನೆಯದು ಬೆಳೆಯಲೇ ಇಲ್ಲ. ಅಂದರೆ ನಮ್ಮಲ್ಲಿ ಭಾಷಣಗಳಾಗಲಿ, ಭಾಷಣ ಮಾಡುವವರಾಗಲಿ ಬೆಳೆಯಲೇ ಇಲ್ಲ, ನಮ್ಮಲ್ಲಿ ಭಾಷಣ ಕಲೆ ಬರೆವಣಿಗೆಯಲ್ಲಿ ಬೆಳೆದು ಬರಲಿಲ್ಲ ಎಂದು ಅರ್ಥ. ಇದರಿಂದ ಭಾಷಣ ಮೀಮಾಂಸೆ ಭಾಷಣ ಮಾಡುವುದಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದರ ಬರೆವಣಿಗೆಗೂ ಸಂಬಂಧಿಸಿದ್ದು ಎಂದು ಅರ್ಥವಾದಂತಾಯಿತು. ಕಾವ್ಯ ಮೀಮಾಂಸೆ ಮತ್ತು ಸೌಂದರ್ಯ ಮೀಮಾಂಸೆಯನ್ನು ಸಾಹಿತ್ಯ ಲಾಕ್ಷಣಿಕರು ಮತ್ತು ತತ್ತ್ವಶಾಸ್ತ್ರಜ್ಞರು ಕ್ರಮವಾಗಿ ಬೆಳೆಸಿದಂತೆ ತೋರುವುದು. ಇದರಿಂದ ಕಾವ್ಯ ಜಿಜ್ಞಾಸೆಯನ್ನು ತತ್ತ್ವಶಾಸ್ತ್ರಜ್ಞರೂ, ಸೌಂದರ್ಯ ಚರ್ಚೆಯನ್ನು ಕಾವ್ಯದ ಲಾಕ್ಷಣಿಕರೂ ಪ್ರಸ್ತಾಪಿಸಿಲ್ಲವೆಂದು ಭಾವಿಸಬಾರದು. ಎರಡೂ ಕ್ಷೇತ್ರಗಳಿಗೂ ಪರಸ್ಪರರ ಕೊಡುಗೆಯನ್ನು ನಾವು ಉಲ್ಲೇಖಿಸಲೇಬೇಕು. ಭಾಷಣ ಮಾತಿನ ಕಲೆಯಾದುದರಿಂದ ಯಾರು ಬೇಕಾದರೂ ಅದನ್ನು ಬೆಳೆಸಬಹುದು ಮತ್ತು ಬಳಸಬಹುದು; ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಇದು ಬರೆವಣಿಗೆಯ ಕಲೆ ಕೂಡ ಎಂಬುದು. ಆದಕಾರಣ ಪ್ರಬಂಧ ರಚನೆಯಲ್ಲಿ ಪಳಗಿರುವವರೆಲ್ಲ, ಇದರಲ್ಲಿ ಪ್ರವೇಶ ಪಡೆಯಬಹುದು; ಮುಖ್ಯವಾಗಿ ಸಾಹಿತ್ಯ ಮತ್ತು ತತ್ತ್ವಶಾಸ್ತ್ರೀಯ ಕ್ಷೇತ್ರದ ಚಿಂತಕರ ಪಾತ್ರವೇ ಇಲ್ಲಿಯೂ ಹೆಚ್ಚಿನದು ಎಂದು ಹೇಳಿದರೆ ತಪ್ಪಾಗದು.

ಹೊಸಗನ್ನಡ ಸಾಹಿತ್ಯದ ನವೋದಯದ ಕಾರಣಪುರುಷರಲ್ಲಿ ಒಬ್ಬರಾದ ಬಿ.ಎಂ.ಶ್ರೀಕಂಠಯ್ಯನವರು ಕಾವ್ಯಮೀಮಾಂಸೆ ಮತ್ತು ಸೌಂದರ್ಯ ಮೀಮಾಂಸೆಗಳನ್ನು ಬಿಟ್ಟು (ಅವೆರಡೂ ಸಾಹಿತ್ಯಕ್ಕೆ ಹತ್ತಿರವಾದವುಗಳು ಮತ್ತು ನೇರವಾಗಿ ಸಂಬಂಧಿಸಿದವುಗಳು) ಭಾಷಣ ಮೀಮಾಂಸೆಯನ್ನು ಕುರಿತು ಏಕೆ ಬರೆದರೋ ತಿಳಿಯುತ್ತಿಲ್ಲ? ಇದಕ್ಕೆ ಎರಡು ಕಾರಣಗಳಿರಬಹುದು: ಒಂದು ಭಾರತೀಯ ಸಂದರ್ಭದಲ್ಲಿ ಇಲ್ಲದ್ದರಿಂದ, ಕನ್ನಡದ ಮೂಲಕ ಇದನ್ನು ಆರಂಭಿಸಬೇಕೆಂಬ ಭಾವನೆ; ಎರಡು ಭಾಷಣ ಕಲೆ ಕುರಿತಾದ ಅದರ ಚರ್ಚೆಗಳ ಅಧ್ಯಾಯ ಉಲ್ಲೇಖಗಳನ್ನು ನೋಡಿದರೆ, ಇದು ಕೂಡ ಸಾಹಿತ್ಯ ಸಂಬಂಧಿಯಾದುದು ಎಂಬ ನಿಲುವು. ಇದರ ಬರೆವಣಿಗೆಯನ್ನು ನೋಡಿದರೆ ಅವರು ಮನಸ್ಸು ಮಾಡಿದ್ದರೆ ಕಾವ್ಯಮೀಮಾಂಸೆಯನ್ನೇ ಬರೆಯಬಹುದಾಗಿತ್ತು ಅನ್ನಿಸುವುದು ಸಹಜ. ಭಾರತೀಯ ಕಾವ್ಯಮೀಮಾಂಸೆ ಬಹುತೇಕ ಸಂಸ್ಕೃತ ಕಾವ್ಯ ಮೀಮಾಂಸೆಯೇ ಆಗಿಬಿಟ್ಟಿದ್ದರಿಂದ ಈ ಹೊಸ ಸಾಹಸಕ್ಕೆ ‘ಶ್ರೀ’ಯವರು ಕೈಹಾಕಿರಬಹುದು. ಇದನ್ನು ಅವರು ಇಂಗ್ಲಿಷಿನಲ್ಲಿ ಬರೆಯುವುದಕ್ಕೆ ಬದಲಾಗಿ ಕನ್ನಡದಲ್ಲಿಯೇ ಬರೆಯಬಹುದಾಗಿತ್ತು. ನಮ್ಮ ವಿಮರ್ಶಕರು ಈ ಇಂಗ್ಲಿಷ್ ಕೃತಿಯ ಕಡೆಗೆ ಹೆಚ್ಚು ಗಮನವಹಿಸದ್ದನ್ನು ನೋಡಿದರೆ, ಈ ಮಾತು ಸರಿಯೆನಿಸುತ್ತದೆ. ಆದರೆ ಈ ಕೃತಿಯನ್ನು ಕೂಡ (ಇಂಗ್ಲಿಷಿನಲ್ಲಿದೆ ಎಂಬ ಕಾರಣಕ್ಕೆ ಬಿಡದೆ) ನಮ್ಮ ಚರ್ಚೆಗೆ, ವಿಮರ್ಶೆಗೆ ತೆಗೆದುಕೊಳ್ಳುವುದರಿಂದ ಪ್ರಯೋಜನವಿದೆ ಎಂಬುದು ನನ್ನ ಅಭಿಪ್ರಾಯ.

ಶ್ರೀಕಂಠಯ್ಯನವರು ತಮ್ಮ ಪುಸ್ತಕಕ್ಕೆ ‘A Handbook of Rhetoric’ ಎಂದು ಶೀರ್ಷಿಕೆ ಕೊಟ್ಟಿದ್ದಾರೆ; ಇದು ೧೯೧೯ರಲ್ಲಿ ಪ್ರಕಟವಾದಂತೆ ತಿಳಿಯುವುದು. ಇದಕ್ಕೂ ಮುಂಚೆಯೇ ಅವರು ‘Rhetoric Notes’ ಎಂಬ ಕೃತಿಯನ್ನು ರಚಿಸಿದ್ದರೆಂದೂ, ಅದು ಸುಮಾರು ೧೯೧೨ರಲ್ಲಿ ಪ್ರಕಟವಾಗಿದ್ದಿರಬೇಕೆಂದೂ ಹೇಳಲಾಗಿದೆ. (ನೋಡಿ: ‘ಶ್ರೀ ಸಾಹಿತ್ಯ’ ಮುನ್ನುಡಿ, ಪುಟ ix, ೧೯೮೩) ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಾಗ, ಭಾಷಣಕಲೆ ಕುರಿತು ಪಾಠ ಮಾಡಬೇಕಾಗಿದ್ದರಿಂದ, ಪಠ್ಯಕ್ಕೆ ನೆರವಾಗುವ ಈ ಚಿಕ್ಕ ಪುಸ್ತಕವನ್ನು ಬಿ.ಎಂ.ಶ್ರೀ. ಪ್ರಕಟಿಸಿದ್ದರೆಂದು ವಿ. ಸೀತಾರಾಮಯ್ಯನವರು ಅಭಿಪ್ರಾಯಪಡುತ್ತಾರೆ(ಅದೇ). ಈ ಚಿಕ್ಕ ಪುಸ್ತಕದ ಪರಿಷ್ಕೃತ ರೂಪವೇ ‘A Handbook of Rhetoric’ ಕೃತಿ. ಅವರು ಪಾಠ ಮಾಡುವ ಅವಕಾಶ ಕಲ್ಪಿತವಾಗದಿದ್ದರೆ ಈ ಪುಸ್ತಕದ ರಚನೆ ಆಗುತ್ತಿರಲಿಲ್ಲ. ಇಂಗ್ಲಿಷಿನಲ್ಲಿ ಬರೆದದ್ದು ಕೂಡ ಅದೇ ಕಾರಣಕ್ಕೆ ಎಂಬುದು ಇಲ್ಲಿ ಸ್ಪಷ್ಟವೇ ಆಗಿವೆ. ‘ಶ್ರೀ’ಯವರು ಕನ್ನಡದ ಗೌರವ ಪ್ರಾಧ್ಯಾಪಕರೂ ಆಗಿದ್ದರಿಂದ ಕನ್ನಡದಲ್ಲಿ ಇಂತಹ ಪುಸ್ತಕವನ್ನು ನಿರೀಕ್ಷಿಸುವುದು ತಪ್ಪಲ್ಲ. ಈ ಪುಸ್ತಕ ಸುಮಾರು ನೂರ ತೊಂಬತ್ತು ಪುಟದಷ್ಟು ವ್ಯಾಪ್ತಿಯದು; ಅನೇಕ ವಿಷಯಗಳು ಅದರಲ್ಲಿ ಪ್ರಸ್ತಾಪಿತವಾಗಿದ್ದು, ಸಾಕಷ್ಟು ದೀರ್ಘವಾಗಿದೆ ಎಂದೇ ಹೇಳಬೇಕು. ಇದರಲ್ಲಿ ಎರಡು ಭಾಗಗಳಿವೆ; ಮೊದಲನೆಯದು ‘Composition’ಗೆ ಸಂಬಂಧಿಸಿದ್ದು; ಎರಡನೆಯದು ‘Literary form’ಗೆ ಸಂಬಂಧಿಸಿದ್ದು. ಮೊದಲನೆಯ ರಚನಾ ಸಂಯೋಜನೆಯಲ್ಲಿ ವಾಕ್ಯ, ಪದಗಳ ಆಯ್ಕೆ, ಅಲಂಕಾರಿಕ ಮಾತು, ಶೈಲಿಯ ಲಕ್ಷಣಗಳು, ಶೈಲಿಯ ವಿವಿಧ ಸ್ವಭಾವಗಳ ವಿಶ್ಲೇಷಣೆ, ಕಾವ್ಯದ ಪದವಿನ್ಯಾಸ, ಪದ್ಯ ಮತ್ತು ಗದ್ಯದ ಲಯ, ಛಂದಸ್ಸು ಮೊದಲಾದ ವಿಷಯಗಳು ಸೇರಿವೆ; ಎರಡನೆಯ ಸಾಹಿತ್ಯಿಕ ರೂಪದಲ್ಲಿ ಸಾಹಿತ್ಯ ಮತ್ತು ಅದರ ವಿಧಗಳು, ಕಾವ್ಯದ ಪ್ರಕಾರಗಳು. ಕಾವ್ಯದ ಸ್ವರೂಪ ಮತ್ತು ಕಾವ್ಯದ ಉಗಮ, ಭಾವಗೀತೆ ಕಾವ್ಯ, ಕಥನಕಾವ್ಯ, ನಾಟಕ ಕಾವ್ಯ, ಕಾವ್ಯದ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-08-2025

ಪ್ರಧಾನವಲ್ಲದ ವಿಧಗಳು, ಗದ್ಯದ ರೂಪಗಳು, ಗದ್ಯದ ಸ್ವರೂಪ, ಇಂಗ್ಲಿಷ್ ಗದ್ಯದ ಇತಿಹಾಸ, ಕಾದಂಬರಿ, ಜೀವನಚರಿತ್ರೆ, ಪ್ರಬಂಧ, ಸಾಹಿತ್ಯ ವಿಮರ್ಶೆ ಮೊದಲಾದ ವಿಷಯಗಳು ಸೇರ್ಪಡೆಯಾಗಿವೆ. ಇವುಗಳನ್ನು ಓದುತ್ತಿದ್ದರೆ ಇವು ಭಾಷಣ ಮೀಮಾಂಸೆಯೊ ಅಥವಾ ಕಾವ್ಯ ಮೀಮಾಂಸೆಯೊ/ವಿಮರ್ಶೆಯೊ ಎಂಬ ಅನುಮಾನ ಬರುವುದು ಸಹಜ. ಇದನ್ನು ಕಂಡೇ ಎಸ್.ವಿ. ರಂಗಣ್ಣ ಅವರು "an introduction to literary criticism entiled Rhetoric' ಎಂದು ಹೇಳಿದ್ದು (ನೋಡಿ 'B.M. Srikantia'). ಅಂದರೆ 'Rhetoric' ಹೆಸರಿನಲ್ಲಿರುವ 'ಸಾಹಿತ್ಯ ವಿಮರ್ಶೆ' (Literary Criticism) ಎಂದು ಅರ್ಥ. 'ಶ್ರೀ'ಯವರು ನೇರವಾಗಿಯೇ ಸಾಹಿತ್ಯ ವಿಮರ್ಶೆ/ಸಾಹಿತ್ಯ ಮೀಮಾಂಸೆ ಎಂದೇ ಬರೆಯಬಹುದಾಗಿತ್ತಲ್ಲ ಎಂದೆನಿಸುವುದು ಸಹಜ. ಇದೆಲ್ಲಕ್ಕೂ ಮೂಲ ಕಾರಣ ಅವರು ಪಾಠಮಾಡುತ್ತಿದ್ದ 'Rhetoric' ಪಠ್ಯ. ಈ ಗೊಂದಲಕ್ಕೆ 'Rhetoric' ಪದಕ್ಕೆ 'ಭಾಷಣಶಾಸ್ತ್ರ' ಎಂದು ಅರ್ಥವಿರುವಂತೆ, 'ಅಲಂಕಾರಶಾಸ್ತ್ರ' ಎಂದೂ ಅರ್ಥವಿರುವುದು ಕಾರಣವಿರಬಹುದು. ಇಷ್ಟಾದರೂ ಅವರು ಬರೆಯ ಹೊರಟಿರುವುದು 'ಭಾಷಣ ಮೀಮಾಂಸೆ'ಯನ್ನೇ ಹೊರತು, 'ಕಾವ್ಯ ಮೀಮಾಂಸೆ' ಯನ್ನಲ್ಲ; ಭಾಷೆ ಮತ್ತು ಶೈಲಿ ಕುರಿತ ವಿಚಾರಗಳು ಎರಡರಲ್ಲೂ ಬರುವುದರಿಂದ ಒಂದು ಇನ್ನೊಂದರಂತೆ ತೋರುತ್ತಿದೆ. ಶ್ರೀಕಂಠಯ್ಯನವರು 'ಸಾಹಿತ್ಯಿಕ ಭಾಷಣ' ಕಲೆಯನ್ನು ಕುರಿತಂತೆ ತಮ್ಮ ವಿಚಾರಗಳನ್ನು ಪ್ರಸ್ತುತ ಪುಸ್ತಕದಲ್ಲಿ ಮಂಡಿಸಿರುವಂತೆ ತೋರುವುದು. ಅವರು ಕರ್ನಾಟಕದ್ಯಾಂತ ಸಂಚರಿಸಿ ನೀಡಿದ ಭಾಷಣಗಳು ಪ್ರಾಯೋಗಿಕ ನಿದರ್ಶನಗಳಾಗಿ ಇಂತಹ ಕಲೆಯ ಚರ್ಚೆಗೆ ಹಿನ್ನೆಲೆಯನ್ನು ಒದಗಿಸಿರಲೂ ಬಹುದು; ಅಥವಾ ಹಾಗೆ ಮಾಡುವುದಕ್ಕೆ ಮೊದಲೇ ಈ ಪುಸ್ತಕ ರಚನೆಯಾಗಿದ್ದಿರಬಹುದು. ಏನೇ ಇರಲಿ, ಅವರು ಇಲ್ಲಿ ಏನು ಹೇಳುತ್ತಾರೆ ಎಂಬುದನ್ನು ಪರಿಶೀಲಿಸುವುದು ಅಗತ್ಯ.

(ಮುಂದುವರೆಯುವುದು)

## ಪ್ರಸ್ತುತ ತಿಂಗಳ ಅಂಗಳ

**೧೬.೦೯.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**
ಸಂಸ್ಥಾಪಕರ ದಿನಾಚರಣೆ ಮತ್ತು ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ.ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ
ಪ್ರಶಸ್ತಿ ಪುರಸ್ಕೃತರು: ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ, ಸಾಂಸ್ಕೃತಿಕ ಸಂಘಟಕರು

**೨೪.೦೯.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ದತ್ತಿಗಳ ಅಡಿಯಲ್ಲಿ ಶ್ರೀ ಕೆ.ವಿ. ಶಂಕರಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ

**೨೭.೦೯.೨೦೨೫ ಶನಿವಾರ ಬೆಳಗ್ಗೆ ೧೧.೦೦ ಗಂಟೆಗೆ**
ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ
ವಿಷಯ: ದೊಡ್ಡರಂಗೇಗೌಡ ಅವರ ಕಾವ್ಯ ಒಂದು ವಿವೇಚನೆ
ವಿಚಾರ ಮಂಡನೆ: ಪ್ರೊ. ಸೋಮಶಂಕರ ಎನ್.
ಸಹಾಯಕ ಪ್ರಾಧ್ಯಾಪಕರು, ಕ್ರೈಸ್ಟ್ ಕಾಲೇಜು

**೩೦.೦೯.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**
ಶಂ.ಬಾ. ಜೋಶಿ ದತ್ತಿ ಕಾರ್ಯಕ್ರಮ
ವಿಷಯ: ಶಂ.ಬಾ. ಜೋಶಿಯವರ ಸಾಹಿತ್ಯದಲ್ಲಿ ವೈಚಾರಿಕತೆ
ವಿಚಾರ ಮಂಡನೆ: ಪ್ರೊ. ಅರುಣ್ ಕುಮಾರ್
ಸಹ ಪ್ರಾಧ್ಯಾಪಕರು, ವಿಜಯ ಕಾಲೇಜು, ಬಸವನಗುಡಿ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩